ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರ ಕಛೇರಿ,
ಕೆ. ಎಚ್. ಬಿ. ಕಾಂಪ್ಲೆಕ್ಸ್, 6ನೇ ಮಹಡಿ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು - 560 009.

**ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ನೇಮಕಾತಿ ಸಮಿತಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಕಾವೇರಿ ಭವನ, 6ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು – 560 009**

**ಅಧಿಸೂಚನೆ ಸಂಖ್ಯೆ:ಡಿಪಿಎನ್:ನೇಸ:09:2019-20**
**ಬೆಂಗಳೂರು, ದಿನಾಂಕ: 12ನೇ ಮೇ 2022**

ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ದಿನಾಂಕ: 26.10.2021ರಂದು ಹೊರಡಿಸಲಾದ ಅಧಿಸೂಚನೆಯಂತೆ ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳಿಗೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ನಾಗರಭಾವಿ, ಬೆಂಗಳೂರು, ಇವರು ದಿನಾಂಕ: 28.05.2022 ಮತ್ತು 29.05.2022ಕ್ಕೆ ಮುಖ್ಯ ಪರೀಕ್ಷೆಯನ್ನು ನಿಗದಿಪಡಿಸಿದ್ದು, ಅರ್ಹ ಅಭ್ಯರ್ಥಿಗಳಿಗೆ ಅವರು ಈ ಹಿಂದೆ ಒದಗಿಸಿದ್ದ ಮೊಬೈಲ್ ಸಂಖ್ಯೆಗಳಿಗೆ ಹಾಗೂ ಇ-ಮೇಲ್ ಐ.ಡಿ.ಗಳಿಗೆ ಅಗತ್ಯ ಮಾಹಿತಿಯನ್ನು ಒದಗಿಸುವಂತೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ವತಿಯಿಂದ ಸೂಚಿಸಿದ್ದು, ಆದರೆ ಕೆಲವು ಅರ್ಹ ಅಭ್ಯರ್ಥಿಗಳು ಇದುವರೆವಿಗೂ ಅಗತ್ಯ ಮಾಹಿತಿಯನ್ನು ಒದಗಿಸಿಲ್ಲವೆಂದು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ವತಿಯಿಂದ ತಿಳಿದುಬಂದಿರುತ್ತದೆ. ಆದಕಾರಣ ಅರ್ಹ ಅಭ್ಯರ್ಥಿಗಳು ಅವರುಗಳ ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐ.ಡಿ.ಗಳಿಗೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ವತಿಯಿಂದ ಕಳುಹಿಸಿರುವ ಪಾಸ್‌ವರ್ಡ್ ಹಾಗೂ ಯೂಸರ್ ನೇಮ್‌ಗಳನ್ನು ಉಪಯೋಗಿಸಿ, ಅಗತ್ಯ ಮಾಹಿತಿಯನ್ನು ದಿನಾಂಕ: 16.05.2022ರ ಒಳಗಾಗಿ ಒದಗಿಸುವಂತೆ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ನೇಮಕಾತಿ ಸಮಿತಿಯ ನಿರ್ಣಯದಂತೆ ಆದೇಶಿತನಾಗಿರುತ್ತೇನೆ.

**ವಿ.ಸೂ:-** ಮುಖ್ಯ ಪರೀಕ್ಷೆಯ ಕುರಿತು ಅಭ್ಯರ್ಥಿಗಳಿಗೆ ಯಾವುದೇ ಸ್ಪಷ್ಟೀಕರಣ/ಗೊಂದಲ ಇದ್ದಲ್ಲಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಸಂಸ್ಥೆಯ ಈ ಕೆಳಕಂಡ ಇ-ಮೇಲ್ ಐ.ಡಿ. ಮೂಲಕ ನೇರವಾಗಿ ಸಂಪರ್ಕಿಸಿ, ಸ್ಪಷ್ಟೀಕರಣ ಪಡೆಯಬಹುದಾಗಿರುತ್ತದೆ.

For any technical/Login issues, please write an e-mail to **appexamhelpdesk@nls.ac.in**

12/5
( ಡಿ. ರಮೇಶ್‌ಬಾಬು )
ಅಭಿಯೋಗ ಉಪ ನಿರ್ದೇಶಕರು (ಆಡಳಿತ)
ನೇಮಕಾತಿ ಸಮಿತಿ ಸದಸ್ಯ ಕಾರ್ಯದರ್ಶಿಗಳ ಪರವಾಗಿ,
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ಇಲಾಖೆ, ಬೆಂಗಳೂರು

**ಪ್ರತಿಯನ್ನು: ಇ-ಮೇಲ್ ಮುಖಾಂತರ ಸಲ್ಲಿಸಲಾಗಿದೆ/ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಛೇರಿಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಗೌರವಪೂರ್ವಕವಾಗಿ ಕೋರಲಾಗಿದೆ.
2. ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು, ಅವರ ಮಾಹಿತಿಗಾಗಿ ಹಾಗೂ ರಾಜ್ಯದ ಎಲ್ಲ ವಕೀಲರ ಸಂಘಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿನಂತಿಸಲಾಗಿದೆ.
3. ಮಾನ್ಯ ರಿಜಿಸ್ಟ್ರಾರ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಭಾವಿ, ಬೆಂಗಳೂರು.
4. ರಾಜ್ಯದ ಎಲ್ಲಾ ಕಾನೂನು ಅಧಿಕಾರಿಗಳು(ಹಿರಿಯ), ಅವರ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಯನ್ನು ಒಳಗೊಂಡಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಭಿಯೋಜಕರ ಕಛೇರಿಯ ಸೂಚನಾ ಫಲಕಗಳಲ್ಲಿ ತಕ್ಷಣ ಪ್ರಕಟಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿದೆ.
5. ಕಛೇರಿ ಸೂಚನಾ ಫಲಕಕ್ಕೆ.

EST-1A/APP Recruitment/Notification-2021.

Scanned with CamScanner